ಪ್ರಶ್ನೆ

ಇ.ಡಬ್ಲ್ಯೂ.ಎಸ್. ಆರ್ಥಿಕವಾಗಿ ದುರ್ಬಲ ವರ್ಗ (ಮಾಸಿಕ ವರಮಾನ ರೂ. ೭೦೦–೦೦ವರೆಗೆ)

ಎಲ್.ಐ.ಜಿ. ಆರ್ಥಿಕವಾಗಿ ಹಿಂದುಳಿದ ವರ್ಗ (ಮಾಸಿಕ ವರಮಾನ ರೂ. ೭೦೧–೦೦ ರಿಂದ ೧೫೦೦–೦೦ ವರೆಗೆ)

ಎಂ.ಐ.ಜಿ. ಮಧ್ಯಮ ಆದಾಯ ವರ್ಗ (ಮಾಸಿಕ ವರಮಾನ ರೂ. ೧೫೦೧–೦೦ ರಿಂದ ೨೫೦೦ ರ ವರೆಗೆ)

ಹೆಚ್.ಐ.ಜ. ಹೆಚ್ಚುವರಿ ಆದಾಯ ವರ್ಗ (ಮಾಸಿಕ ವರಮಾನ ೨೫೦೦–೦೦ ರೂ. ಗಳಿಗಿಂತ ಹೆಚ್ಚಿಗೆ)

ದಸರಾ ಮಹೋತ್ಸವ ಮತ್ತು ವಸ್ತು ಪ್ರದರ್ಶನದ ಬಗ್ಗೆ

೨೨೯. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನ ಕೋಟೆ).—ಮಾನ್ಯ ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಸರಾ ಮಹೋತ್ಸವ ವ್ಯವಸ್ಥೆಗಾಗಿ ಖಾಯಂ ಸಮಿತಿಯನ್ನು ರಚಿಸಲಾಗಿದೆಯೇ ? ಹಾಗಿದ್ದಲ್ಲಿ ಈ ಸಮಿತಿಯ ಸದಸ್ಯರಾರು ?

ಆ) ಮುಂಬರುವ ದಸರಾ ಸಿದ್ಧತೆಗೆ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು? ಹಣಕಾಸಿನ ಅಂದಾಜೆಷ್ಟು ?

ಇ) ವಸ್ತು ಪ್ರದರ್ಶನದಲ್ಲಿ ಕೆಲವು ಖಾಯಂ ಕಟ್ಟಡಗಳನ್ನು ಕಟ್ಟಲು ಸರ್ಕಾರ ಉದ್ದೇಶಿಸಿದೆಯೇ ? (ವಿವರ ನೀಡುವುದು)

ಈ) ಈ ಬಾರಿ ದಸರಾ ಮತ್ತು ವಸ್ತು ಪ್ರದರ್ಶನದ ವಿಶೇಷವೇನು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಇಲ್ಲ.

ಆ) ಸರ್ಕಾರವು ಉನ್ನತಮಟ್ಟದ ಸಮಿತಿಯನ್ನು ರಚಿಸಲಿದ್ದು ಆ ಸಮಿತಿಯು ದಸರಾ ಸಿದ್ಧತೆಯ ಕಾರ್ಯಕ್ರಮಗಳ ಬಗ್ಗೆ ಕ್ರಮಕೈಗೊಳ್ಳುವುದು ದಸರಾ ಮಹೋತ್ಸವಕ್ಕಾಗಿ ೩೦–೦೦ ಲಕ್ಷ ರೂಗಳ ಅನುದಾನ ಇದೆ.

ಇ) ಹೌದು ಈ ವಸ್ತು ಪ್ರದರ್ಶನದ ಖಾಯಂ ಕಟ್ಟಡಗಳ ಸಮುಚ್ಚಯ ನಿರ್ಮಿಸಲು ಸೂಕ್ತ ರೂಪು ರೇಖೆಗಳನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರವು ತಯಾರಿಸುತ್ತಿದೆ.

ಈ) ಈ ಬಾರಿ ದಸರಾ ವಸ್ತು ಪ್ರದರ್ಶನದ ಶತಮಾನೋತ್ಸವ ಆಗುವುದರಿಂದ ದೊಡ್ಡ ಪ್ರಮಾಣದಲ್ಲಿ ಅತ್ಯಂತ ಆಕರ್ಷಕವಾಗಿ ಮತ್ತು ವಿಜೃಂಭಣೆಯಿಂದ ಆಚರಿಸಲು ಯೋಜಿಸಲಾಗಿದೆ.

ಪುತ್ತೂರು ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಮಾಡುವ ಬಗ್ಗೆ

೨೩೦೧. ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪುತ್ತೂರು ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ರಚನೆಯಾಗುವ ವಿಚಾರ ಸರ್ಕಾರದ ಮುಂದಿದೆಯೇ ?

ಆ) ಪುರಸಭೆಯ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ನಾಗರೀಕರಿಗಾಗುವ ತೊಂದರೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ಪ್ರಸ್ತಾಪದ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಇಲ್ಲ.

ಇ) ಕಡಿಮೆ ವೆಚ್ಚದ ನೈರ್ಮಲೀಕರಣ ವ್ಯವಸ್ಥೆಯನ್ನು ಏರ್ಪಡಿಸಲು ಪರಿಶೀಲಿಸಲಾಗುವುದು.

ಪುತ್ತೂರು ಪುರಸಭೆಯಲ್ಲಿರುವ ಟೌನ್ ಹಾಲ್ ಕಟ್ಟಡದ ಬಗ್ಗೆ

೨೩೦೨. ಶ್ರೀ ವಿನಯ ಕುಮಾರ್ ಸೊರಕೆ (ಪುತ್ತೂರು).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪುತ್ತೂರು ಪುರಸಭೆಗೆ ಪುರಭವನ ಕಟ್ಟಡ ಕಟ್ಟಲು ಮಂಜೂರಾಗಿರುವ ಹಣವೆಷ್ಟು ?

ಆ) ಸದರಿ ಹಣದಲ್ಲಿ ಖರ್ಚಾದ ಹಣವೆಷ್ಟು ?

ಇ) ಈ ಕಟ್ಟಡದ ಕಾಮಗಾರಿಯು ಅರ್ಧದಲ್ಲಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಯಾವುದೇ ಮೊತ್ತ ಮಂಜೂರಾಗಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಹೌದು.

ಈ) ಕಟ್ಟಡವನ್ನು ಪೂರ್ಣಗೊಳಿಸಲು ಪುರಸಭೆ ಕ್ರಮ ಕೈಗೊಳ್ಳುತ್ತಿದೆ.

ಹೌಸಿಂಗ್ ಬೋರ್ಡ್ ಮನೆಗಳ ಬಗ್ಗೆ

೨೪೦೫. ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ರಾಜ್ಯ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕರ್ನಾಟಕ ಗೃಹ ಮಂಡಳಿಯವರು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾದ ಕಟ್ಟಿಸಿದ ಮನೆಗಳು ಎಷ್ಟು ? ಮತ್ತು ಆದೇಶವೆಂದು ಹೊರಡಿಸಲಾಯಿತು ?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸದರಿ ಮಂಡಳಿಯು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾದ ಕಟ್ಟಿಸಿದ ಮನೆಗಳು ಎಷ್ಟು ಮತ್ತು ಯಾವಾಗ ? (ತಾಲ್ಲೂಕುವಾರು ಮಾಹಿತಿ ನೀಡುವುದು).

ಇ) ಈ ಮನೆಗಳನ್ನು ಲೋಕೋಪಯೋಗಿ ಇಲಾಖೆಯಿಂದ ಹಿಂದಕ್ಕೆ ಪಡೆದು ಈಗ ನಿರ್ವಹಿಸಲಾಗುವ ಬೆಲೆಗೆ ವಾಸ್ತವ್ಯ ಮಾಡುತ್ತಿರುವವರಿಗೆ ಮಾರಲು ಸಾಧ್ಯವೇ ?

ಈ) ಹೊನ್ನಾವರದಲ್ಲಿ ಕರ್ನಾಟಕ ಗೃಹ ಮಂಡಳಿ ಕಟ್ಟಿಸಿದ್ದ ಖಾಲಿಯಿರುವ ಮನೆಗಳು ಎಷ್ಟು?